**<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>**

## **<u>Spl.C.109/2022</u>**

ದಿನಾಂಕ 19.02.2026
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ - 23 ಪ್ರಾಸಾ - 15

| | | |
|---|---|---|
| ಹೆಸರು | ಃ | ಅನಿಲ್ ಕುಮಾರ್ ವಿ. |
| ತಂದೆಯ ಹೆಸರು | ಃ | ಲೇಟ್ ವೆಂಕಟರಾಜು |
| ವಯಸ್ಸು | ಃ | 49 ವರ್ಷ |
| ಉದ್ಯೋಗ | ಃ | ಡಿವೈಎಸ್‌ಪಿ, Traffic and Road Safety authority, Bengaluru |
| ವಾಸಸ್ಥಳ | ಃ | ಬೆಂಗಳೂರು |

*Evidence recorded through V/C and the witness had kept coordinator Smt.Lakshmi, Stenographer and Typist present and the evidence is recorded in the presence of coordinator from the remote point (Office of the Traffic and Road Safety authority, Bengaluru)*

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

ದಿನಾಂಕ 01.10.2013 ರಿಂದ ದಿನಾಂಕ 06.07.2016 ರವರೆಗೆ ನಾನು ರಾಮನಗರದ ಗ್ರಾಮೀಣ ವೃತ್ತದಲ್ಲಿ ಸಿಪಿಐ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೆನು.

2. ದಿನಾಂಕ 29.05.2016 ರಂದು ಪ್ರಸ್ತುತ ಪ್ರಕರಣದ ಕಡತವನ್ನು ಮುಂದಿನ ತನಿಖೆಗೆಂದು ಚಾಸಾ.1 ಇವರಿಂದ ಪಡೆದಿರುತ್ತೇನೆ.

3. ಅದೇ ದಿನ ಬಿಡದಿ ಪೊಲೀಸ್ ಠಾಣೆಗೆ ಭೇಟಿ ನೀಡಿ ಅಲ್ಲಿ ಹಾಜರಿದ್ದ 1ನೇ ಮತ್ತು 3ನೇ ಆರೋಪಿತರಾದ ತಿಮ್ಮಯ್ಯ ಮತ್ತು ರಾಣಿ ಇವರನ್ನು ವಿಚಾರಿಸಿ, ದಸ್ತಗಿರಿ ನಿಯಮಗಳನ್ನು ಪಾಲಿಸಿ ದಸ್ತಗಿರಿ ಮಾಡಿ, ಅವರ ಸ್ವಯಿಚ್ಛಾ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಸದರಿ

1ನೇ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿಯನ್ನು ನ್ಯಾಯಾಲಯದ ವಿಸಿ ಮೂಲಕ ಸಾಕ್ಷಿಗೆ ತೋರಿಸಲಾಗಿದ್ದು, ನೋಡಿ ಗುರುತಿಸಿರುತ್ತಾರೆ.

4. ಸದರಿ 1ನೇ ಮತ್ತು 3ನೇ ಆರೋಪಿತರು ತಮ್ಮ ಹೇಳಿಕೆಗಳಲ್ಲಿ ತಮ್ಮ ಜೊತೆಗೆ ಬಂದರೆ, ತಾವು ಮೃತಳಾದ ಮಂಜುಳಾ ಇವಳನ್ನು ಕೊಲೆ ಮಾಡಿದ ಸ್ಥಳ ಮತ್ತು ಮಚ್ಚು ಮತ್ತು ಶವವನ್ನು ಹೂತಿರುವ ಸ್ಥಳವನ್ನು ತೋರಿಸುವುದಾಗಿ ಹೇಳಿರುತ್ತಾರೆ. ಸದರಿ ಹೇಳಿಕೆ ಸಂಬಂಧಿಸಿದ 1ನೇ ಆರೋಪಿತನ ಸ್ವಯಿಚ್ಛಾ ಹೇಳಿಕೆಯನ್ನು ಈಗ ನೋಡಿ ಗುರುತಿಸಿದ್ದು, ಅದನ್ನು ಮೂಲ ಕಡತದಲ್ಲಿ ಅದನ್ನು ನಿ.ಪಿ.12 ಎಂದು ಗುರುತಿ,ದ್ದು, ಅದನ್ನು ಈ ಪ್ರಕರಣದಲ್ಲಿ ನಿಶಾನೆ ಪಿ 23 ಎಂದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.23(ಎ) ಎಂದು ಗುರುತಿಸಲಾಯಿತು.

5. 3ನೇ ಆರೋಪಿತಳ ಸ್ವಯಿಚ್ಛಾ ಹೇಳಿಕೆಯನ್ನು ಸಾಕ್ಷಿ ಈಗ ನೋಡಿ ಗುರುತಿಸುತ್ತಿರುವುದರಿಂದ, ಅದನ್ನು ಮೂಲಕ ಕಡತದಲ್ಲಿ ನಿ.ಪಿ.13 ಎಂದು ಗುರುತಿಸಿದ್ದು, ಈ ಪ್ರಕರಣದಲ್ಲಿ ಅದನ್ನು ನಿಶಾನೆ ಪಿ 24 ಎಂದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.24(ಎ) ಎಂದು ಗುರುತಿಸಲಾಯಿತು.

6. ಸದರಿ ಮೃತ ಮಂಜುಳಾ ಇವಳ ಶವವನ್ನು ಹೊರತೆಗೆಯುವ ಸಲುವಾಗಿ ರಾಮನಗರದ ಎಸಿರವರಿಗೆ ಸ್ಥಳದಲ್ಲಿ ಹಾಜರಿರಲು ಒಂದು ಮನವಿ ಪತ್ರವನ್ನು ಕಳುಹಿಸಿರುತ್ತೇನೆ. ಎಸಿರವರು ಸದರಿ ಕಾರ್ಯಕ್ಕೆ ತಹಶೀಲ್ದಾರ್ ರಾಮನಗರ ಇವರಿಗೆ ನೇಮಿಸಿ ಆದೇಶ ಹೊರಡಿಸಿದ್ದು, ಅದನ್ನು ಈಗ ನೋಡಿ ಗುರುತಿಸುತ್ತಿದ್ದು, ಅದನ್ನು ಮೂಲ ಕಡತದಲ್ಲಿ ನಿ.ಪಿ.11 ಎಂದು ಗುರುತಿಸಿದ್ದು, ಈ ಕಡತದಲ್ಲಿ ಈಗಾಗಲೇ ನಿಶಾನೆ ಪಿ 13 ಎಂದು ಗುರುತಿಸಲಾಗಿದೆ.

7. ಅದರಂತೆ, ಬೆಂಗಳೂರಿನ ರಾಜರಾಜೇಶ್ವರಿ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯ ವಿಧಿವಿಜ್ಞಾನ ವಿಭಾಗದ ಅಧಿಕಾರಿಗಳಿಗೆ ಸ್ಥಳದಲ್ಲಿ ಹಾಜರಿರಲು ಒಂದು ಕೋರಿಕೆ ಪತ್ರವನ್ನು ಕಳುಹಿಸಿರುತ್ತೇನೆ. ನಂತರ, ಚಾಸಾ.3 ರಿಂದ 5 ಇವರನ್ನು ಠಾಣೆಗೆ ಬರಮಾಡಿಕೊಂಡು ಅಲ್ಲಿಂದ ನಾನು, ಚಾಸಾ.3 ರಿಂದ 5, ತಹಶೀಲ್ದಾರ್, ರಾಮನಗರ, 1ನೇ ಹಾಗೂ 3ನೇ ಆರೋಪಿತರು ಹಾಗೂ ನನ್ನ ಸಿಬ್ಬಂದಿ ವರ್ಗದವರೊಂದಿಗೆ ಸದರಿ ಆರೋಪಿತರು ತೋರಿಸಿದಂತೆ ಹೆಗ್ಗಡಗೆರೆ ಗ್ರಾಮದ ರಾಮಕೃಷ್ಣ ಎನ್ನುವವರ ತೋಟದ ಬಳಿ ಕರೆದುಕೊಂಡು ಹೋಗಿ ಶವವನ್ನು ಹೂತಿದ್ದ ಜಾಗವನ್ನು ತೋರಿಸಿದಂತೆ, ಕೆಲಸಗಾರರಾದ ಚಾಸಾ.8 ರಿಂದ 10 ಇವರ ಮೂಲಕ ಸದರಿ ಮೃತ ಮಂಜುಳಾ ಇವಳ ಮೃತದೇಹವನ್ನು ನೆಲದಿಂದ ಅಗೆದು ಹೊರತೆಗೆಸಿರುತ್ತೇನೆ. ಆ ಸಮಯದಲ್ಲಿ ತಹಶೀಲ್ದಾರ್‌ರವರು ಸದರಿ ಶವದ ಪಂಚನಾಮೆಯನ್ನು ಮಧ್ಯಾಹ್ನ 12.00 ರಿಂದ 2.00 ಗಂಟೆವರೆಗೆ ಪಂಚರಾದ ಚಾಸಾ.3ರಿಂದ 5 ಇವರ ಸಮಕ್ಷಮದಲ್ಲಿ ಮಾಡಿರುತ್ತಾರೆ. ಸದರಿ ತಹಶೀಲ್ದಾರ್‌ರವರು ರಾಜರಾಜೇಶ್ವರಿ ಆಸ್ಪತ್ರೆಯ ವೈದ್ಯರಿಗೆ ಸದರಿ ಶವದ ಪರೀಕ್ಷೆಯನ್ನು ಮಾಡಲು ಒಂದು ಮನವಿ ಪತ್ರ ನೀಡಿದ್ದರ ಮೇರೆಗೆ ಸ್ಥಳದಲ್ಲಿ ಬಂದಿದ್ದ ಸದರಿ ವೈದ್ಯರು ಶವದ ಪರೀಕ್ಷೆಯನ್ನೂ ಸಹ ಮಾಡಿರುತ್ತಾರೆ. ಶವ ಪರೀಕ್ಷೆಯಾದ ನಂತರ, ಸದರಿ ಶವವನ್ನು ಚಾಸಾ.2 ಇವಳಿಗೆ ಹಸ್ತಾಂತರಿಸಿರುತ್ತೇನೆ. ಸದರಿ ಎಲ್ಲಾ ಪ್ರಕ್ರಿಯೆಗಳನ್ನು ಚಾಸಾ.12 ಈತನ ಮುಖಾಂತರ ವಿಡಿಯೋಗ್ರಫಿಯನ್ನೂ ಸಹ ಮಾಡಿಸಿರುತ್ತೇನೆ.

8. ಅದೇ ದಿನ 1ನೇ ಮತ್ತು 3ನೇ ಆರೋಪಿತರು ತೋರಿಸಿದ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾಸಾ.3 ರಿಂದ 5 ಇವರ ಸಮಕ್ಷಮದಲ್ಲಿ ಒಂದು ಸ್ಥಳ ಪಂಚನಾಮೆಯನ್ನು ಮಧ್ಯಾಹ್ನ 2.15 ರಿಂದ 3.00 ಗಂಟೆವರೆಗೆ ಮಾಡಿ, ಅವರ ಸಹಿಗಳನ್ನು ಪಡೆದಿರುತ್ತೇನೆ.

ಸದರಿ ಪಂಚನಾಮೆಯನ್ನು ಈಗ ನೋಡಿ ಗುರುತಿಸುತ್ತಿದ್ದು, ಅದನ್ನು ಮೂಲ ಕಡತದಲ್ಲಿ ನಿ.ಪಿ.6 ಎಂದು ಗುರುತಿಸಿದ್ದು, ಈ ಕಡತದಲ್ಲಿ ಈಗಾಗಲೇ ನಿಶಾನೆ ಪಿ 4 ಎಂದು ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ಈಗ ನಿ.ಪಿ.4(ಡಿ) ಎಂದು ಗುರುತಿಸಲಾಯಿತು. ಸದರಿ ನಿ.ಪಿ.4 ರಡಿಯಲ್ಲಿಯೇ ಗೋಡೆಗೆ ಹತ್ತಿದ್ದ ರಕ್ತದ ಕಲೆಯನ್ನು ಮತ್ತು ಗೋಡೆಯ ಬೇರೆ ರಕ್ತಹತ್ತದ ಮಣ್ಣನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ 'ಹೆಚ್' ಎಂದು ಸೀಲ್ ಹಾಕಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ 1ನೇ ಮತ್ತು 3ನೇ ಆರೋಪಿತರು ಕೊಲೆ ಮಾಡಲು ಉಪಯೋಗಿಸಿದ ಮಚ್ಚನ್ನು ಒಂದು ನೀರಿನ ಡ್ರಮ್‌ನಿಂದ ಹಾಜರುಪಡಿಸಿದಂತೆ ಅದನ್ನೂ ಸಹ ಪ್ಯಾಕ್ ಮಾಡಿ 'ಹೆಚ್' ಎಂದು ಸೀಲ್ ಹಾಕಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಅಮಾನತ್ತುಪಡಿಸಿಕೊಂಡ 3 ವಸ್ತುಗಳನ್ನು ನಮ್ಮ ಠಾಣಾ ಸ್ವತ್ತಿನ ಪಟ್ಟಿ ಸಂಖ್ಯೆ.139/2016ಗೆ ಅಳವಡಿಸಿಕೊಂಡಿರುತ್ತೇನೆ.

9. ಸದರಿ ಮಚ್ಚನ್ನು ಸಾಕ್ಷಿ ನೋಡಿ ಗುರುತಿಸುತ್ತಿದ್ದು, ಅದನ್ನು ಮೂಲ ಕಡತದಲ್ಲಿ ಮು.ಮಾ.1 ಎಂದು ಗುರುತಿಸಿದ್ದು, ಈ ಕಡತದಲ್ಲಿ ಮುದ್ದೆಮಾಲು 6 ಎಂದು ಈಗಾಗಲೇ ಗುರುತಿಸಲಾಗಿದೆ. ರಕ್ತಮಿಶ್ರಿತ ಗೋಡೆಯ ಮಣ್ಣನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮೂಲ ಕಡತದಲ್ಲಿ ಮು.ಮಾ.8 ಎಂದು ಗುರುತಿಸಿದ್ದು, ಈ ಕಡತದಲ್ಲಿ ಅದನ್ನು ಮುದ್ದೆಮಾಲು 7 ಎಂದು ಗುರುತಿಸಲಾಯಿತು. ಸದರಿ ಗೋಡೆಯ ಮಾದರಿ ಮಣ್ಣನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮೂಲ ಕಡತದಲ್ಲಿ ಮು.ಮಾ.9 ಎಂದು ಗುರುತಿಸಿದ್ದು, ಈ ಕಡತದಲ್ಲಿ ಮುದ್ದೆಮಾಲು 8 ಎಂದು ಗುರುತಿಸಲಾಯಿತು.

10. ಘಟನಾ ಸ್ಥಳದಲ್ಲಿಯೇ ಒಂದು ಕೈ ನಕ್ಷೆಯನ್ನು ತಯಾರಿಸಿರುತ್ತೇನೆ. ಸದರಿ ಕೈ ನಕ್ಷೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮೂಲ ಕಡತದಲ್ಲಿ ನಿ.ಪಿ.14 ಎಂದು

ಗುರುತಿಸಿದ್ದು, ಈ ಕಡತದಲ್ಲಿ ಅದನ್ನು ನಿಶಾನೆ ಪಿ 25 ಎಂದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.25(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ.10, 15, ಮತ್ತು 19ರಿಂದ 21 ಇವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ತದನಂತರ, ಅದೇ ದಿನ 1ನೇ ಮತ್ತು 3ನೇ ಆರೋಪಿತರಿಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

12. ದಿಃ 30.05.2016 ರಂದು ಚಾಸಾ.11 ಮತ್ತು 16 ಇವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ದಿಃ11.06.2016 ರಂದು, ಚಾಸಾ.12 ಇವರು ಮೇಲೆ ಹೇಳಿದಂತೆ ವಿಡಿಯೋಗ್ರಫಿ ಮಾಡಿರುವುದರ ಕುರಿತು ಒಂದು ಡಿವಿಡಿಯನ್ನು ಹಾಜರುಪಡಿಸಿದ್ದರ ಮೇರೆಗೆ, ಅದನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಅದರಂತೆ, ಚಾಸಾ.12 ಇವರಿಂದ ಒಂದು ಪ್ರಮಾಣ ಪತ್ರವನ್ನೂ ಸಹ ಪಡೆದುಕೊಂಡಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸುತ್ತಿದ್ದು, ಅದನ್ನು ಮೂಲ ಕಡತದಲ್ಲಿ ನಿ.ಪಿ.8 ಎಂದು ಗುರುತಿಸಿದ್ದು, ಈ ಕಡತದಲ್ಲಿ ಅದನ್ನು ನಿಶಾನೆ ಪಿ 10 ಎಂದು ಈಗಾಗಲೇ ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ಈಗ ನಿ.ಪಿ.10(ಬಿ) ಎಂದು ಗುರುತಿಸಲಾಯಿತು. ಸದರಿ ಅಮಾನತ್ತುಪಡಿಸಿಕೊಂಡ ಡಿವಿಡಿಯನ್ನು ನಮ್ಮ ಠಾಣಾ ಸ್ವತ್ತಿನ ಪಟ್ಟಿ ಸಂಖ್ಯೆ.251/2016ಕ್ಕೆ ಅಳವಡಿಸಿಕೊಂಡಿರುತ್ತೇನೆ. 13. ದಿಃ 06.07.2016 ರಂದು ನನಗೆ ವರ್ಗಾವಣೆಯಾದ ಪ್ರಯುಕ್ತ ಮುಂದಿನ ತನಿಖೆಗೆಂದು ಪ್ರಕರಣದ ಕಡತವನ್ನು ಚಾಸಾ.24 ಇವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲುಃ ಶ್ರೀ.ಕೆ.ವಿ.ಕೆ.., ವಕೀಲರಿಂದ ಆರೋಪಿಯ ಪರವಾಗಿಃ**

14. ದಿಃ 29.05.2016 ರಂದು ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ಪ್ರಸ್ತುತ ಕಡತವನ್ನು ಮುಂದಿನ ತನಿಖೆಗೆಂದು ಚಾಸಾ.9 ಇವರಿಂದ ಪಡೆದುಕೊಂಡಿರುತ್ತೇನೆ. ಆ ಕುರಿತು ಯಾವುದೇ ಬರವಣಿಗೆಯಲ್ಲಿ ಅಳವಡಿಸಿಕೊಂಡಿರುವುದಿಲ್ಲ. ಚಾಸಾ.3 ರಿಂದ 5 ಇವರಿಗೆ ಪಂಚರಾಗಲೆಂದು ಯಾವುದೇ ಲಿಖಿತ ನೋಟೀಸನ್ನು ನೀಡಿರಲಿಲ್ಲ. ನಮ್ಮ ಠಾಣೆಯಿಂದ ಶವ ಹೂತಿದ್ದ ಜಾಗ ಸುಮಾರು 5 ಕಿಮೀಗಳ ಅಂತರದಲ್ಲಿ ಇರುತ್ತದೆ. ತಹಶೀಲ್ದಾರ್‌ರವರು ನಮ್ಮ ಠಾಣೆಗೆ ಎಷ್ಟು ಗಂಟೆಗೆ ಬಂದಿದ್ದರು ಎಂದು ನನಗೆ ಈಗ ನಿಖರವಾಗಿ ಹೇಳಲು ಬರುವುದಿಲ್ಲ.

15. ಚಾಸಾ.12 ಇವರಿಂದ ಪಡೆದುಕೊಂಡಿದ್ದ ಡಿವಿಡಿಯು ಮಹೇಶ್ ಕುಮಾರ್ ಈತನ ಕೊಲೆಗೆ ಸಂಬಂಧಿಸಿದಂತೆ ಇರುತ್ತದೆ ಎಂದು ಪಿಎಫ್ ನಂಬರ್.251/2016 ರಲ್ಲಿ ನಮೂದಿಸಿರುತ್ತೇನೆ ಎಂದರೆ, ಅದು ಕಣ್ತಪ್ಪಿನಿಂದ ತಪ್ಪಾಗಿ ನಮೂದಿಸಿದ್ದು ಇರುತ್ತದೆ ಎಂದು ಹೇಳುತ್ತೇನೆ. ಚಾಸಾ.12 ಈತನಿಂದ ಅಮಾನತ್ತು ಪಡಿಸಿಕೊಂಡೆ ಎಂದು ಹೇಳುವ ಡಿವಿಡಿಗೆ ಸಂಬಧಿಸಿದಂತೆ ಅಮಾನತ್ತಿನ ಪಂಚನಾಮೆಯಲ್ಲಿ ಯಾವುದೇ ಪಂಚರ ಸಹಿ ಇರುವುದಿಲ್ಲ ಎನ್ನುವುದು ಸರಿ. ನನ್ನ ತನಿಖಾ ಕಾರ್ಯದಲ್ಲಿ 2ನೇ ಆರೋಪಿತನು ತಲೆಮರೆಸಿಕೊಂಡಿದ್ದನು.

16. ಮೃತಳು ವಾಸ ಮಾಡುತ್ತಿದ್ದ ಮನೆಯ ನೆರೆ-ಹೊರೆಯವರನ್ನು ವಿಚಾರಣೆ ಮಾಡಿ ಹೇಳಿಕೆ ದಾಖಲಿಸಿಕೊಂಡಿರುತ್ತೇನೆಯೇ ಎಂದು ಪ್ರಶ್ನಿಸಿದರೆ, ಅದು ತೋಟದ ಮನೆಯಾಗಿದ್ದರಿಂದ ಅಕ್ಕ-ಪಕ್ಕದಲ್ಲಿ ಯಾವುದೇ ಮನೆಗಳು ಇರದೇ ಇದ್ದುದ್ದರಿಂದ ಅಲ್ಲಿ ಯಾರನ್ನೂ ನೆರೆ-ಹೊರೆಯವರು ಎಂದು ಪರಿಗಣಿಸಲು ಸಾಧ್ಯವಾಗಿರುವುದಿಲ್ಲ. ಪಿರ್ಯಾದಲ್ಲಿ ಕಂಡುಬರುವ ಅಮೂಲ್ಯ ಮತ್ತು ರಾಜೇಶ್ವರಿ ಎಂಬುವವರ ಹೇಳಿಕೆಗಳನ್ನು ದಾಖಲಿಸಿ ಕೊಂಡಿರುತ್ತೇನೆಯೇ ಎಂದು ಪ್ರಶ್ನಿಸಿದರೆ ಅವರು 4 ವರ್ಷ ಮತ್ತು 6 ವರ್ಷ ಚಿಕ್ಕ ಮಕ್ಕಳಾಗಿದ್ದರಿಂದ ದಾಖಲಿಸಿಕೊಂಡಿರುವುದಿಲ್ಲ ಎಂದು ಹೇಳುತ್ತೇನೆ.

17. ಅದೇ ದಿನ ಬಿಡದಿ ಪೊಲೀಸ್ ಠಾಣೆಗೆ ಭೇಟಿ ನೀಡಿ ಅಲ್ಲಿ ಹಾಜರಿದ್ದ 1ನೇ ಮತ್ತು 3ನೇ ಆರೋಪಿತರಾದ ತಿಮ್ಮಯ್ಯ ಮತ್ತು ರಾಣಿ ಇವರನ್ನು ವಿಚಾರಿಸಿ, ದಸ್ತಗಿರಿ ನಿಯಮಗಳನ್ನು ಪಾಲಿಸಿ ದಸ್ತಗಿರಿ ಮಾಡಿ, ಅವರ ಸ್ವಯಿಚ್ಛಾ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಸದರಿ 1ನೇ ಮತ್ತು 3ನೇ ಆರೋಪಿತರು ತಮ್ಮ ಹೇಳಿಕೆಗಳಲ್ಲಿ ತಮ್ಮ ಜೊತೆಗೆ ಬಂದರೆ, ತಾವು ಮೃತಳಾದ ಮಂಜುಳಾ ಇವಳನ್ನು ಕೊಲೆ ಮಾಡಿದ ಸ್ಥಳ ಮತ್ತು ಮಚ್ಚು ಮತ್ತು ಶವವನ್ನು ಹೂತಿರುವ ಸ್ಥಳವನ್ನು ತೋರಿಸುವುದಾಗಿ ಹೇಳಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

18. ಸದರಿ ಮೃತ ಮಂಜುಳಾ ಇವಳ ಶವವನ್ನು ಹೊರತೆಗೆಯುವ ಸಲುವಾಗಿ ರಾಮನಗರದ ಎಸಿರವರಿಗೆ ಸ್ಥಳದಲ್ಲಿ ಹಾಜರಿರಲು ಒಂದು ಮನವಿ ಪತ್ರವನ್ನು ಕಳುಹಿಸಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಎಸಿರವರು ಸದರಿ ಕಾರ್ಯಕ್ಕೆ ತಹಶೀಲ್ದಾರ್ ರಾಮನಗರ ಇವರಿಗೆ ನೇಮಿಸಿ ಆದೇಶ ಹೊರಡಿಸಿದ್ದು, ಅದನ್ನು ಈಗ ನೋಡಿ ಗುರುತಿಸುತ್ತಿದ್ದು, ಅದನ್ನು ಈಗಾಗಲೇ ನಿ.ಪಿ.13 ಎಂದು ಗುರುತಿಸಿದ್ದು ಇರುತ್ತದೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಅದರಂತೆ, ಬೆಂಗಳೂರಿನ ರಾಜರಾಜೇಶ್ವರಿ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯ ವಿಧಿವಿಜ್ಞಾನ ವಿಭಾಗದ ಅಧಿಕಾರಿಗಳಿಗೆ ಸ್ಥಳದಲ್ಲಿ ಹಾಜರಿರಲು ಒಂದು ಕೋರಿಕೆ ಪತ್ರವನ್ನು ಕಳುಹಿಸಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

19. ನಂತರ, ಚಾಸಾ.3 ರಿಂದ 5 ಇವರನ್ನು ಠಾಣೆಗೆ ಬರಮಾಡಿಕೊಂಡು ಅಲ್ಲಿಂದ ನಾನು, ಚಾಸಾ.3 ರಿಂದ 5, ತಹಶೀಲ್ದಾರ್, ರಾಮನಗರ, 1ನೇ ಹಾಗೂ 3ನೇ ಆರೋಪಿತರು ಹಾಗೂ ನನ್ನ ಸಿಬ್ಬಂದಿ ವರ್ಗದವರೊಂದಿಗೆ ಸದರಿ ಆರೋಪಿತರು ತೋರಿಸಿದಂತೆ ಹೆಗ್ಗಡಗೆರೆ ಗ್ರಾಮದ ರಾಮಕೃಷ್ಣ ಎನ್ನುವವರ ತೋಟದ ಬಳಿ ಕರೆದುಕೊಂಡು ಹೋಗಿ ಶವವನ್ನು ಹೂತಿದ್ದ ಜಾಗವನ್ನು ತೋರಿಸಿದಂತೆ, ಕೆಲಸಗಾರರಾದ ಚಾಸಾ.8 ರಿಂದ 10 ಇವರ ಮೂಲಕ ಸದರಿ ಮೃತ ಮಂಜುಳಾ ಇವಳ ಮೃತದೇಹವನ್ನು ನೆಲದಿಂದ ಅಗೆದು ಹೊರತೆಗೆಸಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಆ ಸಮಯದಲ್ಲಿ ತಹಶೀಲ್ದಾರ್ ರವರು ಸದರಿ ಶವದ ಪಂಚನಾಮೆಯನ್ನು ಮಧ್ಯಾಹ್ನ 12.00 ರಿಂದ 2.00 ಗಂಟೆವರೆಗೆ ಪಂಚರಾದ ಚಾಸಾ.3 ರಿಂದ 5 ಇವರ ಸಮಕ್ಷಮದಲ್ಲಿ ಮಾಡಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

20. ಸದರಿ ತಹಶೀಲ್ದಾರ್‌ರವರು ರಾಜರಾಜೇಶ್ವರಿ ಆಸ್ಪತ್ರೆಯ ವೈದ್ಯರಿಗೆ ಸದರಿ ಶವದ ಪರೀಕ್ಷೆಯನ್ನು ಮಾಡಲು ಒಂದು ಮನವಿ ಪತ್ರ ನೀಡಿದ್ದರ ಮೇರೆಗೆ ಸ್ಥಳದಲ್ಲಿ ಬಂದಿದ್ದ ಸದರಿ ವೈದ್ಯರು ಶವದ ಪರೀಕ್ಷೆಯನ್ನೂ ಸಹ ಮಾಡಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಶವ ಪರೀಕ್ಷೆಯಾದ ನಂತರ, ಸದರಿ ಶವವನ್ನು ಚಾಸಾ.2 ಇವಳಿಗೆ ಹಸ್ತಾಂತರಿಸಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

21. ಸದರಿ ಎಲ್ಲಾ ಪ್ರಕ್ರಿಯೆಗಳನ್ನು ಚಾಸಾ.12 ಈತನ ಮುಖಾಂತರ ವಿಡಿಯೋಗ್ರಫಿಯನ್ನೂ ಸಹ ಮಾಡಿಸಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಅದೇ ದಿನ 1ನೇ ಮತ್ತು 3ನೇ ಆರೋಪಿತರ ತೋರಿಕೆಯ ಮೇರೆಗೆ

ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾಸಾ.3 ರಿಂದ 5 ಇವರ ಸಮಕ್ಷಮದಲ್ಲಿ ಒಂದು ಸ್ಥಳ ಪಂಚನಾಮೆಯನ್ನು ಮಧ್ಯಾಹ್ನ 2.15ರಿಂದ 3.00 ಗಂಟೆವರೆಗೆ ಮಾಡಿ, ಅವರ ಸಹಿಗಳನ್ನು ಪಡೆದಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

22. ಸದರಿ ನಿ.ಪಿ.4 ರಡಿಯಲ್ಲಿಯೇ ಗೋಡೆಗೆ ಹತ್ತಿದ್ದ ರಕ್ತದ ಕಲೆಯನ್ನು ಮತ್ತು ಗೋಡೆಯ ಬೇರೆ ರಕ್ತಹತ್ತದ ಮಣ್ಣನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ 'ಹೆಚ್' ಎಂದು ಸೀಲ್ ಹಾಕಿ ಅಮಾನತ್ತುಪಡಿಸಿಕೊಂಡಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಸದರಿ 1ನೇ ಮತ್ತು 3ನೇ ಆರೋಪಿತರು ಕೊಲೆ ಮಾಡಲು ಉಪಯೋಗಿಸಿದ ಮಚ್ಚನ್ನು ಒಂದು ನೀರಿನ ಡ್ರಮ್‌ನಿಂದ ಹಾಜರುಪಡಿಸಿದಂತೆ ಅದನ್ನೂ ಸಹ ಪ್ಯಾಕ್ ಮಾಡಿ 'ಹೆಚ್' ಎಂದು ಸೀಲ್ ಹಾಕಿ ಅಮಾನತ್ತುಪಡಿಸಿಕೊಂಡಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಅಮಾನತ್ತು ಪಡಿಸಿಕೊಂಡ 3 ವಸ್ತುಗಳನ್ನು ನಮ್ಮ ಠಾಣಾ ಸ್ವತ್ತಿನ ಪಟ್ಟಿ ಸಂಖ್ಯೆ.139/2016ಗೆ ಅಳವಡಿಸಿಕೊಂಡಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

23. ಸದರಿ ಮಚ್ಚನ್ನು ಈಗ ನೋಡಿ ಗುರುತಿಸುತ್ತಿದ್ದು, ಅದನ್ನು ಈಗಾಗಲೇ ಮು.ಮಾ.6 ಎಂದು ಗುರುತಿಸಿದ್ದು ಇರುತ್ತದೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಘಟನಾ ಸ್ಥಳದಲ್ಲಿಯೇ ಒಂದು ಕೈ ನಕ್ಷೆಯನ್ನು ತಯಾರಿಸಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಅದೇ ದಿನ ಚಾಸಾ.10, 15, ಮತ್ತು 19 ರಿಂದ 21 ಇವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

24. ದಿಃ 30.05.2016ರಂದು ಚಾಸಾ.11 ಮತ್ತು 16 ಇವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ದಿಃ11.06.2016ರಂದು, ಚಾಸಾ.12 ಇವರು ಮೇಲೆ ಹೇಳಿದಂತೆ ವಿಡಿಯೋಗ್ರಫಿ ಮಾಡಿರುವುದರ ಕುರಿತು ಒಂದು ಡಿವಿಡಿಯನ್ನು ಹಾಜರುಪಡಿಸಿದ್ದರ ಮೇರೆಗೆ, ಅದನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಅದರಂತೆ, ಚಾಸಾ.12 ಇವರಿಂದ ಒಂದು ಪ್ರಮಾಣ ಪತ್ರವನ್ನೂ ಸಹ ಪಡೆದುಕೊಂಡಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಅಮಾನತ್ತುಪಡಿಸಿಕೊಂಡ ಡಿವಿಡಿಯನ್ನು ನಮ್ಮ ಠಾಣಾ ಸ್ವತ್ತಿನ ಪಟ್ಟಿ ಸಂಖ್ಯೆ.251/2016ಕ್ಕೆ ಅಳವಡಿಸಿಕೊಂಡಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಎಲ್ಲಾ ದಾಖಲಾತಿಗಳನ್ನು ನಾನು ಠಾಣೆಯಲ್ಲಿಯೇ ತಯಾರಿಸಿಕೊಂಡು ಸುಳ್ಳು ಸಾಕ್ಷಿನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ವಿದ್ಯುನ್ಮಾನ ದೃಶ್ಯ ಸಂವಹನದ ಮೂಲಕ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು. ಸಂಪೂರ್ಣ ಹೇಳಿಕೆಯ ದಾಖಲಾತಿಯ ಸಮಯದಲ್ಲಿ ನ್ಯಾಯಾಲಯದ ಮತ್ತು ಸಾಕ್ಷಿಯ ಕಡೆಯ ಗಣಕಯಂತ್ರಗಳು ನಿಯತವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಎರಡೂ ಕಡೆಗಳಿಂದ ಯಾವುದೇ ಅಂತರ್ಜಾಲ ತಾಂತ್ರಿಕ ತೊಂದರೆ ಉಂಟಾಗಿರುವುದಿಲ್ಲ. ಎರಡೂ ಕಡೆಗಳಿಂದ ಸಂವಹನಕಾರರು ಕಾರ್ಯ ನಿರ್ವಹಿಸುತ್ತಿದ್ದು, ಇಬ್ಬರ ಸಹಿಗಳನ್ನು ಪಡೆಯಲಾಗಿರುತ್ತದೆ)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ.)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**